"...ಇರ್ಲಿ ಬಿಡು ಇರ್ನೆ, ನೀನು ಅದಕ್ಕಾಗಿ ಹೆಚ್ಚು ಚಿಂತೆ ಮಾಡಬೇಡ. ನೋಡು ಹೇಗೂ ನೀನೀಗ ನಿನ್ನ ಗೆಳತಿಯನ್ನು ಅಪವಿತ್ರ ಮಾಡಿಬಿಟ್ಟಿದ್ದೀಯಾ. ಈಗ ನಾವು ಅವಳನ್ನು ಮದುವೆಯಾಗುವ ಒಬ್ಬ ಒಳ್ಳೆಯ ಕ್ಯಾಥೋಲಿಕ್ ವರನನ್ನು ಹುಡಿಕಿದರಾಯ್ತು."

ತನ್ನ ತಂದೆ ಸಂದರ್ಭ ಏನೆಂಬುದರ ಬಗ್ಗೆ ಗಂಭೀರವಾಗಿದ್ದಾರೋ ಇಲ್ಲವೋ ಅಥವಾ ತನ್ನ ಕಾಲೆಳೆಯಲೆಂದು ಅವರು ಬೇಕಂತಲೇ ಹೀಗೆ ಮಾಡುತ್ತಿದ್ದಾರೋ ಎಂದು ಇರ್ನೆಗೆ ಯಾವುದೂ ತಿಳಿಯದಂತಾಯ್ತು. ನೇರವಾಗಿ ಅವರನ್ನೇ ಕೇಳಬೇಕೆಂದುಕೊಂಡ ಆಕೆಗೆ ಮತ್ತೇನೆನ್ನಿಸಿತೋ, ಎದ್ದವಳೇ ಒಳಗೆ ನಡೆದುಬಿಟ್ಟಳು.

'ಅಂದರೆ, ತಾನು ಶರ್ಮಿಳಾಳನ್ನು ಅಪವಿತ್ರ ಮಾಡಿದೆ ಎಂದಾಯಿತು!! ಆದರೆ ತಾನು ನಿಜವಾಗಿ ಮಾಡಿದ್ದೇನು? ಅದಕ್ಕೆ ಅಪವಿತ್ರತೆಯ ಕಳಂಕ ಅಂಟಿಕೊಂಡಿತು. ಅಪವಿತ್ರ ಮಾಡಿದೆ ಎಂದರೆ, ತಾನು ಅವಳನ್ನು ಕೆಡಿಸಿದೆ ಎಂದಾಯ್ತು. ಅಪ್ಪ ಹೇಳುತ್ತಾರೆ—ಅವಳನ್ನು ಮದುವೆಯಾಗಲು ಒಬ್ಬ ಕ್ಯಾಥೋಲಿಕ್ ವರನನ್ನು ಹುಡುಕಬೇಕು—ಎಂದು. ಆದರೆ ಇದು ಸಾಧ್ಯವೆ? ಮದುವೆ ಎಂಬುದು ಅವರವರ ವೈಯಕ್ತಿಕ ಆಯ್ಕೆಗೆ ಸಂಬಂಧಿಸಿದ ಪ್ರಶ್ನೆ. ಇದೀಗ ಪಾಲಕರು ತಮ್ಮ ಮಕ್ಕಳಿಗಾಗಿ ಸಂಗಾತಿಗಳನ್ನು ಹುಡುಕುವ ದಿನಗಳೂ ದೂರ ಹೋಗಿವೆ ಎಂದೂ ಅಪ್ಪ ಹೇಳುತ್ತಾರೆ. ಪುಸ್ತಕಗಳಲ್ಲಿಯೂ ನಾವು ಇದನ್ನೇ ಓದುತ್ತಿದ್ದೇವೆ. ಶರ್ಮಿಳಾ ಪಾಪದ ಹುಡುಗಿ. ದೇವರೆ, ಅವಳಿಗೆ ಮಾತ್ರ ಏನೂ ಆಗದಿರಲೆಂದು ಬೇಡುವೆ.'

ಸಂಜೆ ಇರ್ನೆ ಹೊರಗೆ ಹೋಗಲೆಂದು ಬಟ್ಟೆ ಬದಲಾಯಿಸಿದಳು. ಅವಳನ್ನು ನೋಡಿದ ತಾಯಿ, "ಎಲ್ಲಿಗೆ ಹೊರಟಿರುವೆ ಇರ್ನೆ?" ಎಂದು ಆಶ್ಚರ್ಯದಿಂದ ಕೇಳುತ್ತಲೇ, "ಓಹೋ... ನಿನ್ನ ಗೆಳತಿಯ ಮನೆಗಾ?..." ಎಂದು ಉದ್ದೇಶಪೂರ್ವಕವಾಗಿ ಮತ್ತೊಂದು ಮಾತು ಸೇರಿಸಿದಳು."ನಾನು ಪ್ರಾರ್ಥನೆಗಾಗಿ ಚರ್ಚ್‌ಗೆ ಹೋಗುತ್ತಿದ್ದೇನಮ್ಮ" ಎಂದಳು ಇರ್ನೆ. ರವಿವಾರದ ಕಡ್ಡಾಯ ಪ್ರಾರ್ಥನೆಗೆ ಹೋಗಲು ಆಗದಿರುವವರಿಗಾಗಿ ಶನಿವಾರ ಸಾಯಂಕಾಲ ಪ್ರಾರ್ಥನಾ ಸಭೆ ಇರುತ್ತಿತ್ತು. ಅಂದು ಸಾಮಾನ್ಯವಾಗಿ ಹೆಚ್ಚು ಜನರ ಗದ್ದಲ ಇರುತ್ತಿರಲಿಲ್ಲವಾದ ಕಾರಣ ಇರ್ನೆ ಆ ದಿನವೇ ಪ್ರಾರ್ಥನೆ ಸೇವೆಗೆ ಹೋಗುತ್ತಿದ್ದಳು.

ಸಾಧ್ಯವಿರುವಷ್ಟು ತನ್ನನ್ನೇ ತಾನು ಸಮಾಧಾನಪಡಿಸಿಕೊಳ್ಳುತ್ತ ಇರ್ನೆ ಪ್ರಾರ್ಥನಾ ಸಭೆಯಲ್ಲಿ ಪಾಲ್ಗೊಂಡಳು. ಪ್ರಾರ್ಥನೆ ಮುಗಿದ ನಂತರ ಚರ್ಚ್ ಖಾಲಿಯಾಗುವುದನ್ನು ಕಾಯ್ದು ಅವಳು ಪೂಜ್ಯ ಫಾದರ್ ಅವರನ್ನು ಹಿಂಬಾಲಿಸಿ ಪವಿತ್ರ ಸನ್ನಿಧಾನದೊಳಗೆ ಪ್ರವೇಶಿಸಿದಳು. ಅಲ್ಲಿ ಅವರಿಬ್ಬರನ್ನುಳಿದು ಬೇರಾರೂ ಇರಲಿಲ್ಲ.

"ಫಾದರ್, ನಾನೊಂದು ತಪ್ಪೊಪ್ಪಿಗೆ ಮಾಡಿಕೊಳ್ಳಬಯಸುತ್ತೇನೆ" ಇರ್ನೆ ಕೇಳಿಕೊಂಡಳು. ಒಂದು ಕ್ಷಣ ಆಶ್ಚರ್ಯಚಕಿತರಾದ ಫಾದರ್ ಅವಳತ್ತ ನೋಡಿ, ತಲೆ ಅಲ್ಲಾಡಿಸುತ್ತ, "ಬಾ ಮಗೂ" ಎಂದರು. ತಮ್ಮ ಶಲ್ಯವನ್ನು ಕುತ್ತಿಗೆಯ ಸುತ್ತ ಸರಿಪಡಿಸಿಕೊಳ್ಳುತ್ತ ಅವರು ಕುಳಿತುಕೊಂಡರು. ಇರ್ನೆ ಅವರೆದುರು ಮಂಡಿಯೂರಿ ಕುಳಿತು, ಎದೆ ಹಾಗೂ ಭುಜ ಮುಟ್ಟಿಕೊಂಡು ಕ್ರಾಸ್ ಚಿನ್ಹೆಗೆ ಗೌರವ ಸಲ್ಲಿಸುವುದರೊಂದಿಗೆ ಬಾಗಿ, "ಫಾದರ್, ನಾನೊಂದು ಪಾಪಕೃತ್ಯ ಮಾಡಿರುವೆ. ನನ್ನನ್ನು ಆಶೀರ್ವದಿಸಿ ಕ್ಷಮಿಸಿರಿ" ಎಂದಳು ದೈನ್ಯದಿಂದ.

"ಮಗಳೆ, ನೀನು ಈ ಹಿಂದೆ ಯಾವಾಗ ತಪ್ಪೊಪ್ಪಿಗೆ ಕೇಳಿದ್ದು?"

ಇರ್ನೆ ಅವರ ಪ್ರಶ್ನೆಗೆ ಉತ್ತರಿಸುತ್ತಲೇ, "ಫಾದರ್, ನಿನ್ನೆ ನಾನು ಒಂದು ಪಾಪ ಮಾಡಿರುವೆ" ಎಂದು ಮತ್ತೆ ಹೇಳಿದಳು.